ಆಗಸ್ಟ್ 23, 2005

## ವಿದೇಶೀ ಕರೆನ್ಸಿ ಸಂದಾಯಕ್ಕೆ ಒತ್ತಾಯ ಹೇರುವಂತಿಲ್ಲ

ಹೋಟೆಲ್ ಮುಂತಾದ ಸೇವಾದಾರರು ವಿದೇಶೀಯರಿಗೆ ವಿಭಿನ್ನ ಬೆಲೆಗಳನ್ನು ಅಮೇರಿಕನ್ ಡಾಲರುಗಳಲ್ಲಿ ತಿಳಿಸಿ, ವಿದೇಶೀ ವಿನಿಮಯ ರೂಪದಲ್ಲಿ ಸಂದಾಯ ಮಾಡಲು ಒತ್ತಾಯಿಸುತ್ತಾರೆಂದು ರಿಸರ್ವ್ ಬ್ಯಾಂಕಿನ ಗಮನಕ್ಕೆ ತರಲಾಗಿದೆ. ಈ ರೂಢಿಯು ವಿದೇಶಿ ವಿನಿಮಯ ವ್ಯವಸ್ಥಾಪನಾ ಕಾಯಿದೆ, (ಎಫ್‌ಇಎಂಎ) 1999ಕ್ಕೆ ವಿರುದ್ಧವಾಗಿದ್ದು ಭಾರತದಲ್ಲಿನ ದೇಶೀಯ ಚಲಾವಣೆಯ ಕಾನೂನು ಮಾನ್ಯತೆಯನ್ನು ಪ್ರಶ್ನಿಸುವಂತಿದೆ.

ಈ ಹಿಂದೆ ಭಾರತ ಸರ್ಕಾರವು ವಿದೇಶಿ ವಿನಿಮಯ ನಿಯಂತ್ರಣಾ ಕಾಯಿದೆ (ಎಫ್‌ಇಆರ್‌ಎ), 1973ರಡಿ 1981ರ ಆಗಸ್ಟ್ 20ರಂದು ಒಂದು ಅಧಿಸೂಚನೆ ಹೊರಡಿಸಿ, ಭಾರತಕ್ಕೆ ಬರುವ ವಿದೇಶೀ ಪ್ರವಾಸಿಗರು ವಿದೇಶೀ ವಿನಿಮಯದ ರೂಪದಲ್ಲಿ ಹಣ ಸಂದಾಯ ಮಾಡಲು ತಿಳಿಸಿತ್ತು. ಆದರೆ 1973ರ ಎಫ್‌ಇಆರ್‌ಎ ಕಾಯಿದೆ ರದ್ದತಿಗೊಂಡಿದೆ. ಪ್ರಸಕ್ತ ವಿದೇಶಿ ವಿನಿಮಯ ವಿನಿಯಮಗಳನ್ನು 1999ರ ಎಫ್‌ಇಎಂಎ ಕಾಯಿದೆಯಡಿ ರಚಿಸಲಾಗಿದ್ದು, ಇದು 2000ನೇ ವರ್ಷದ ಜೂನ್ 1ರಿಂದ ಜಾರಿಗೆ ಬಂದಿದೆ.

ಭಾರತದ ಹೊರಗೆ ವಾಸಿಸುವ ವ್ಯಕ್ತಿಯು ಭಾರತಕ್ಕೆ ಭೇಟಿ ನೀಡಿದಾಗ ವಿದೇಶೀ ವಿನಿಮಯ ರೂಪದಲ್ಲಿ ಮಾಡಿದ ಹಣ ಪಾವತಿಯನ್ನು ಸ್ವೀಕರಿಸಲು ಭಾರತೀಯ ನಿವಾಸಿಗಳಿಗೆ ಸಾಧ್ಯವಾಗುವುದಕ್ಕಾಗಿ, ರಿಜರ್ವ್ ಬ್ಯಾಂಕ್ ಆದೇಶ ಕ್ರಮ ಸಂಖ್ಯೆ 15 ದಿನಾಂಕ 3–5–2000ನ್ನು 'ಫೆಮಾ' ಅಡಿ ಹೊರಡಿಸಲಾಗಿದೆ ಎಂದು ಸ್ಪಷ್ಟಪಡಿಸಲಾಗಿದೆ. ವಹಿವಾಟಿನ ಅನುಕೂಲಕ್ಕಾಗಿ ಒಬ್ಬ ವಿದೇಶಿಯನು ತಾನು ಪಡೆದ ಸೇವೆಗಾಗಿ ಭಾರತದ ರೂಪಾಯಿ ರೂಪದಲ್ಲಿ ಅಥವಾ ವಿದೇಶಿ ವಿನಿಮಯ ರೂಪದಲ್ಲಿ ಹಣ ಪಾವತಿ ಮಾಡಲು ಅವಕಾಶವಿರಬೇಕೆಂಬ ವಾತಾವರಣವನ್ನು ತನ್ಮೂಲಕ ಕಲ್ಪಿಸಲಾಗಿದೆ. ಇದು, ವಿದೇಶಿ ವಿನಿಮಯ ರೂಪದಲ್ಲಿ ಹಣ ಪಾವತಿ ಮಾಡುವಂತೆ ಒತ್ತಾಯಿಸಲು ಭಾರತ ನಿವಾಸಿಗಳಿಗೆ ಹಕ್ಕು ನೀಡುವುದಿಲ್ಲ.

ಪ್ರಸ್ತುತ, ಇಂತಹ ಸಂದರ್ಭಗಳಲ್ಲಿ ಅನಿವಾಸಿಗಳು ವಿದೇಶಿ ವಿನಿಮಯ ರೂಪದಲ್ಲಿ ಹಣ ಪಾವತಿ ಮಾಡುವುದನ್ನು ಕಡ್ಡಾಯಪಡಿಸುವ ಯಾವುದೇ ಸೂಚನೆ ಜಾರಿಯಲ್ಲಿಲ್ಲ. ಆದ್ದರಿಂದ ಭಾರತದಲ್ಲಿ ನೀಡಿದ ಸೇವೆಗೆ ವಿದೇಶಿ ವಿನಿಮಯ ರೂಪದಲ್ಲಿ ಹಣ ಪಾವತಿ ಮಾಡಲು ಒತ್ತಾಯಿಸುವುದು ಪ್ರಸಕ್ತ ವಿದೇಶೀ ವಿನಿಮಯ ನಿಯಂತ್ರಣಗಳಿಗೆ ಸೂಕ್ತವಾಗಿರುವುದಿಲ್ಲ.

ಅಜಿತ್ ಪ್ರಸಾದ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2005–2006/238